ಅ) ಮಂಜೂರು ಮಾಡಿರುವುದಿಲ್ಲ.

ಆ) 2007--08ನೇ ಸಾಲಿನ ದರಪಟ್ಟಿ ಪ್ರಕಾರ ರೂ. 31.00 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಕೆಲವು ಷರತ್ತಿಗೊಳಪಟ್ಟು, ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಒಪ್ಪಿಗೆ ನೀಡಿರುತ್ತದೆ.

ಇ) ಸುಮಾರು 4942 ಎಕರೆ (2000 ಹೆಕ್ಟೇರ್) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಸಾಧ್ಯವಾಗಲಾರದು.

ಬಿದರಿ--ಗುಣದಾಳ ರಸ್ತೆ

64(62) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿದರಿ--ಗುಣದಾಳ ನಡುವಿನ ಸೇತುವೆ ಹಾಗೂ ಅಕಾಲ ಮಳೆಯಿಂದ ಕಿತ್ತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಿನ್ನೀರಿನಿಂದ ಭಾದಿತವಾಗಿರುವ ಈ ರಸ್ತೆಗೆ ಸಣ್ಣ ಸೇತುವೆ ನಿರ್ಮಿಸುವ ಕಾರ್ಯ ಯಾವಾಗ ಪ್ರಾರಂಭಿಸಲಾಗುತ್ತದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ಬಂದಿದೆ.

ಆ) ಈಗ ಕೃಷ್ಣಾ ನ್ಯಾಯಾಧೀಕರಣದ ತೀರ್ಮ ಬಂದಿದ್ದು, ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವ ಹಿನ್ನೆಲೆಯಲ್ಲಿ, ಸದರಿ ಸೇತುವೆ ನಿರ್ಮಿಸುವುದನ್ನು ತಾಂತ್ರಿಕವಾಗಿ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ನಿಗಮದಡಿ ಮುಂದಿನ ಕ್ರಮ ಜರುಗಿಸಲಾಗುವುದು.

ಕೃಷ್ಣಾನದಿಯ ನೀರನ್ನು ಹೆಚ್ಚುವರಿಯಾಗಿ ಉಪಯೋಗಿಸುವುದು

65(362) ಶ್ರೀ ಸಿದ್ದುಸವದಿ (ತೇರದಾಳ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿಯ ಒಟ್ಟು ನೀರಿನ ಪ್ರಮಾಣವೆಷ್ಟು, ಸ್ಕೀಂ 'ಎ' ಮತ್ತು ಸ್ಕೀಂ 'ಬಿ' ಗಳಲ್ಲಿ ಆಯಾ ರಾಜ್ಯಕ್ಕೆ ಹಂಚಿಕೆಯಾದ ನೀರಿನ ಪ್ರಮಾಣ ವೆಷ್ಟು;

ಆ) ಕೃಷ್ಣಾ ಕೊಳ್ಳದ ಬಗ್ಗೆ ನ್ಯಾಯಾಧೀಕರಣದ (ಟ್ರಿಬ್ಯೂನಲ್) ತೀರ್ಮ ರಾಜ್ಯದ ಪರವಾಗಿ ಬಂದಿದ್ದಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ಟಿ.ಎಂ.ಸಿ. ನೀರು ಲಭ್ಯವಾಗುವುದು;

ಇ) ತೀರ್ಪಿನಿಂದ ಲಭ್ಯವಾಗುವ ನೀರನ್ನು ಯಾವ ಉದ್ದೇಶಕ್ಕೆ ಮತ್ತು ಹೇಗೆ ಬಳಸಿಕೊಳ್ಳುವ ಆಲೋಚನೆ ಇದೆ;

ಈ) ಈಗಾಗಲೇ ತೀರ್ಮ ಬಂದಿದ್ದರಿಂದ ರಾಜ್ಯ ಸರ್ಕಾರ ಆ ನೀರನ್ನು ಬಳಸಿಕೊಳ್ಳುವ ಯಾವ ಯಾವ ಯೋಜನೆ ಹಾಕಿಕೊಂಡಿದೆ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ)

ರಾಜ್ಯ	ಕೃ.ಜವಿ. ನ್ಯಾ–1	ಕೃ.ಜ.ವಿ.ನ್ಯಾ–2		ಒಟ್ಟು
		ಶೇ.65ರ ಅವಲಂಬನೆ ಯಂತೆ	ಸರಾಸರಿ ಲಭ್ಯತೆ	
ಕರ್ನಾಟಕ	734	72	105	911
ಮಹಾರಾಷ್ಟ್ರ	585	46	35	666
ಆಂಧ್ರ ಪ್ರದೇಶ	811	45	145	1001
ಒಟ್ಟು	**2130**	**163**	**285**	**2578**

ಆ) ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–2ರ ಐತೀರ್ಪಿನಂತೆ ರಾಜ್ಯಕ್ಕೆ 177 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ.

ಇ) ಕೃಷ್ಣಾ ಕೊಳದಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರನ್ನು ನೀರಾವರಿ, ಪೌರಬಳಕೆ ಹಾಗೂ ಕೈಗಾರಿಕೆಗಳಿಗೆ ಬಳಸಿಕೊಳ್ಳುವ ಉದ್ದೇಶ ಹೊಂದಲಾಗಿದೆ.

ಈ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿಯಲ್ಲಿ ಈ ಕೆಳಗಿನ 9 ಯೋಜನೆಗಳನ್ನು ಗುರುತಿಸಲಾಗಿರುತ್ತದೆ:

1) ಮುಳವಾಡ ಏತ ನೀರಾವರಿ ಯೋಜನೆ

2) ಚಿಮ್ಮಲಗಿ ಏತ ನೀರಾವರಿ ಯೋಜನೆ

3) ಇಂಡಿ ಏತ ನೀರಾವರಿ ಯೋಜನೆ ವಿಸ್ತರಣೆ

4) ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ

5) ರಾಂಪುರ ಏತ ನೀರಾವರಿ ಯೋಜನೆ ವಿಸ್ತರಣೆ

6) ಮಲ್ಲಾಬಾದ್ ಏತ ನೀರಾವರಿ ಯೋಜನೆ

7) ಕೊಪ್ಪಳ ಜಿಲ್ಲೆಗೆ ನೀರು ಒದಗಿಸುವ ಯೋಜನೆ

8) ಭೀಮಾ ದಂಡೆ ಮತ್ತು

9) ಹೆರಕಲ್ ಏತ ನೀರಾವರಿ ಯೋಜನೆ

ಊ) ಘಟಪ್ರಭ ಎಡದಂಡೆ ನಾಲೆ ವ್ಯಾಪ್ತಿಯ ಬಾದಿತ ನೀರಾವರಿ ಕ್ಷೇತ್ರಕ್ಕೆ ಉದ್ದೇಶಿತ ಪೂರಕ ಏತ ನೀರಾವರಿ ವ್ಯವಸ್ಥೆಯಾದ ಚಮ್ಮಡ ಹಾಗೂ ಸಸಾಲಟ್ಟಿ ಯೋಜನೆಗೆ ನೀರು ಹಂಚಿಕೆ ಪರಿಶೀಲನೆಯಲ್ಲಿದೆ.

ಕಿರು ಅರಣ್ಯ ಭೂಮಿ ಕಬಳಿಕೆ

67(168) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತುರುಹಳ್ಳಿ ಕಿರು ಅರಣ್ಯದಲ್ಲಿ ಸರ್ವೆ ನಂ. 5ರಲ್ಲಿ 42 ಎಕರೆ ಮತ್ತು 41ರಲ್ಲಿ 94 ಎಕರೆ, 42ರಲ್ಲಿ 159 ಎಕರೆ ಭೂಮಿಯನ್ನು ಕರ್ನಾಟಕ ಅರಣ್ಯ ಅಧಿನಿಯಮ 1963ರ ಕಲಂ 64ಎ ಉಲ್ಲಂಘಿಸಿ ಅರಣ್ಯ ಇಲಾಖೆಯಿಂದ ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುಪ್ರೀಂ ಕೋರ್ಟ್ ತೀರ್ಪು ಪ್ರಕಾರ ಅರಣ್ಯ ಎಂಬ ವ್ಯಾಜ್ಯ ಇರುವ ಈ ಜಮೀನನ್ನು ಅರಣ್ಯೇತರ ಚಟುವಟಿಕೆಗಳಿಗಾಗಿ ಉಪಯೋಗಿಸಬಾರದು ಎಂಬ ನಿಯಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ವಿವರ ನೀಡುವುದು;

ಇ) 2000ರಿಂದ ಈವರೆಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದ ಬಗ್ಗೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು);

ಈ) ಶಿವಮೊಗ್ಗ ಜಿಲ್ಲೆ ಭದ್ರಾವತಿ/ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅವ್ಯವಹಾರ ನಡೆದ ಬಗ್ಗೆ ಲೋಕಾಯುಕ್ತರಿಗೆ ದೂರು ನೀಡಲಾಗಿದೆಯೇ? (ವಿವರ ನೀಡುವುದು)?